ಇದನ್ನೆಲ್ಲಾ ಪರಿಗಣಿಸಿ ಬೇರೆ ಕಡೆ 1 ಕೊಟ್ಟಿದ್ದೀರಿ ಬೆಂಗಳೂರು ನಗರದಲ್ಲಿ ಜಾಸ್ತಿ ಇರುವುದರಿಂದ 2 ಕೊಡುವುದಕ್ಕೆ ಸಾಧ್ಯವೇ? 40 ಇರುವುದನ್ನು 42 ಮಾಡಿ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಬೆಂಗಳೂರು ನಗರದಲ್ಲಿ ತರೆಯಬಾರದೆಂದೇನೂ ಇಲ್ಲ. ಬೆಂಗಳೂರು ನಗರದಲ್ಲಿ ಸಧ್ಯಕ್ಕೆ ಈ ವರ್ಷ ತೆಗೆಯುವುದಕ್ಕೆ.....

ಅಧ್ಯಕ್ಷರು:- ಮಾನ್ಯ ವೈ.ರಾಮಕೃಷ್ಣ ಅವರ ಸಮಸ್ಯೆ, ಅವರು ಪ್ರತಿನಿಧಿಸತಕ್ಕಂತಹ ಕ್ಷೇತ್ರ ಆನೇಕಲ್. ಗ್ರಾಮಾಂತರ ಪ್ರದೇಶವಾದರೂ ಕೂಡ ಇದು ಬೆಂಗಳೂರು ನಗರ ಜಿಲ್ಲೆಗೆ ಬರುತ್ತದೆ. ಆದ್ದರಿಂದ ಬೆಂಗಳೂರು ನಗರ ಜಿಲ್ಲೆಗೂ ಕೂಡ ಈ ಸೌಲಭ್ಯವನ್ನು ವಿಸ್ತರಿಸುತ್ತೀರೋ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಖಂಡಿತವಾಗಿ ಪ್ರಸ್ತಾವನೆ ಬಂದರೆ ಅದನ್ನು ಮುಂದಿನ ಸಾಲಿನಲ್ಲಿ ಪರಿಶೀಲಿಸುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ವಸತಿ ಶಾಲೆಗಳನ್ನು ಯಾವ ಉದ್ದೇಶಕ್ಕಾಗಿ ಪ್ರಾರಂಭ ಮಾಡಿದ್ದೀರೋ ಅದು ಸಫಲತೆಯನ್ನು ಕಂಡಿದೆಯೇ? ಬಿಜಾಪುರ ಜಿಲ್ಲೆಯ ಬಂತನಾಳ ವಸತಿ ಶಾಲೆ ಇದೆ ಅಲ್ಲಿ ನೂರು ಜನ ವಿದ್ಯಾರ್ಥಿಗಳು ಇದ್ದಾರೆ. ಆದರೆ ಶಿಕ್ಷಕರು ಇರುವುದು ಬಹಳ ಕಡಿಮೆ. ಅಲ್ಲಿ ಹೆಡ್ ಮಾಸ್ಟರ್ ಮತ್ತೊಬ್ಬರು ಡೆಪ್ಯುಟೇಷನ್ ಮೇಲೆ ಬಂದಂತಹ ಒಬ್ಬ ಶಿಕ್ಷಕರು. ಇಲ್ಲಿಯವರೆಗೂ ಪ್ರತ್ಯ ಪುಸ್ತಕ ಕೊಡುವುದಕ್ಕಾಗುತ್ತಿಲ್ಲ ವಸ್ತ್ರಗಳನ್ನೂ ಕೂಡ ಕೊಡುವುದಕ್ಕಾಗುತ್ತಿಲ್ಲ. ಹೀಗಿರುವಾಗ ಅವರಿಗೆ ಒಳ್ಳೆಯ ರೀತಿಯಿಂದ ಶಿಕ್ಷಣ ಒದಗಿಸುವುದಕ್ಕೆ ತಮ್ಮ ಕಡೆಯಿಂದ ಸಾಧ್ಯವಾಗುತ್ತದೆಯೋ ಅಥವ ಇಲ್ಲವೋ?

ಅಧ್ಯಕ್ಷರು:- ಚಿಮ್ಮನಕಟ್ಟಿಯವರೇ ನೀವು ಹಿಂದುಳಿದ ವರ್ಗಕ್ಕೆ ಸೇರಿದವರು ನೆಗಡಿ ಹಿಡಿದರೆ ಮೂಗನ್ನೇ ತೆಗೆದು ಹಾಕುವುದಕ್ಕಾಗುತ್ತದೆಯೇ? ಇದು ಇನ್ನೂ ಪ್ರಾರಂಭಿಕ ಹಂತದಲ್ಲಿದೆ ಎಂದು ಅವರು ಹೇಳುತ್ತಿದ್ದಾರೆ. ಇದು ಗುಡ್ ಸ್ಕೀಮ್ ಅದನ್ನು ಎನ್‌ಕರೇಜ್ ಮಾಡಿ.

ವಿಷಯ:- ಚಿಕ್ಕಮಗಳೂರು ನಗರಕ್ಕೆ ಯಗಚಿ ಕುಡಿಯುವ ನೀರು ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 148 (1061)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರಕ್ಕೆ ಯಗಚಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತರುವ ಕಾರ್ಯಕ್ರಮ ಸರ್ಕಾರದ ಮುಂದಿದೆಯೇ?

ಆ) ಸರ್ಕಾರವು ಯೋಜನೆಗಾಗಿ ಅನುಮತಿ ನೀಡಿದೆಯೇ? ನೀಡಿದ್ದಲ್ಲಿ ಇದರ

ಅಂದಾಜು ವೆಚ್ಚವೆಷ್ಟು?

ಇ) ಈ ಯೋಜನೆಯ ಕಾರ್ಯ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಇದೆ.

ಆ) ಸರ್ಕಾರವು 11-8-1994ರಲ್ಲಿ ಈ ಯೋಜನೆಗೆ ತಾಂತ್ರಿಕ ಅನುಮೋದನೆ ನೀಡಿದೆ. ಕೆಳಕಂಡ ಆರ್ಥಿಕ ಮಾದರಿಯಲ್ಲಿ ಇದರ ಅಂದಾಜು ವೆಚ್ಚ ರೂ. 1375 ಲಕ್ಷ ರೂ.ಗಳು.

ಹುಡ್ಕೋ ಸಾಲ	ರೂ.962-5 ಲಕ್ಷಗಳು
ಸರ್ಕಾರದ ಸಾಲ	ರೂ. 137-5 ಲಕ್ಷಗಳು
ನಗರ ಸಭೆ	ರೂ.275-0 ಲಕ್ಷಗಳು
ಒಟ್ಟು	ರೂ. 1375-0 ಲಕ್ಷಗಳು.

ಇ) ಚಿಕ್ಕಮಗಳೂರು ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ನಗರ ಸಭೆಯ ತನ್ನ ವಂತಿಕೆಯ ರೂ. 275 ಲಕ್ಷಗಳಲ್ಲಿ 1/3 ಭಾಗ ಅಂದರೆ 92 ಲಕ್ಷ ರೂ.ಗಳನ್ನು ಮಂಡಳಿಗೆ ಪಾವತಿ ಮಾಡಬೇಕೆಂದು ಷರತ್ತು ಹಾಕಲಾಗಿದೆ. ಆದರೆ ನಗರ ಸಭೆ ಇದುವರೆಗೆ ಸ್ವಲ್ಪವೂ ಹಣ ಸಂದಾಯ ಮಾಡಿಲ್ಲ. ಆದ್ದರಿಂದ ಸರ್ಕಾರ ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ. ಈ ಮಧ್ಯೆ ಈ ಯೋಜನೆಗೆ ತಾಂತ್ರಿಕ ಸಾಧ್ಯತಾ ವರದಿಯನ್ನು ಹೊರಗಡೆಯಿಂದ ಆರ್ಥಿಕ ಸಹಾಯ ಪಡೆಯಲು ತಯಾರಿಸಲಾಗುತ್ತಿದೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ನನ್ನ ಪ್ರಶ್ನೆಗಳಿಗೆ ಉತ್ತರ ಬರುವುದರ ಬಗ್ಗೆ ಮನಸ್ಸಿಗೆ ಬಹಳ ನೋವಾಗುತ್ತದೆ. ನಾನು ಕೇಳುವಂತಹ ಪ್ರಶ್ನೆಗಳಿಗೆ ಉತ್ತರವೇ ಬೇರೆ ರೀತಿಯಲ್ಲಿ ಬರುತ್ತದೆ. ಬೇಲೂರು ಮತ್ತು ಚಿಕ್ಕಮಗಳೂರು ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಸರಕಾರ ಕಾರ್ಯಕ್ರಮ ಹಮ್ಮಿಕೊಂಡಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಅವರು ಕೇವಲ ಚಿಕ್ಕಮಗಳೂರಿಗೆ ಮಾತ್ರ 13.75 ಲಕ್ಷ ರೂಪಾಯಿ ಯೋಜನೆ ಇದೆ ಎಂದು ಹೇಳಿದ್ದಾರೆ. 1994ರಲ್ಲಿ ನಾವು ಅನುಮತಿ ನೀಡಿದ್ದೇವೆಂದು ಹೇಳಿದ್ದಾರೆ. ಹಿಂದಿನ ವರ್ಷದ ಅಧಿವೇಶನ ನಡೆಯುವಾಗ ನಾನು ಇದೇ ಪ್ರಶ್ನೆಯನ್ನು ಹಾಕಿದ್ದೆ.

ಅಂದಿನ ಉಪಮುಖ್ಯಮಂತ್ರಿಗಳು ಹಾಗು ನಮ್ಮ ಗೃಹಸಚಿವರಾಗಿದ್ದಂಥ ಪಿಜಿಆರ್ ಸಿಂಧ್ಯಾರವರು ಒಂದು ಆಶ್ವಾಸನೆಯನ್ನು ಈ ಮನೆಯಲ್ಲಿ ಕೊಟ್ಟಿದ್ದರು. ತುರ್ತಾಗಿ ಈ ಯೋಜನೆಯ ಕೆಲಸವನ್ನು ನಾವು ಪ್ರಾರಂಭ ಮಾಡುತ್ತೇವೆ ಎಂದು. ಆದರೆ ಇವತ್ತಿನವರೆಗೆ ಈ ಯೋಜನೆಯ ಕೆಲಸ ಪ್ರಾರಂಭವಾಗಿಲ್ಲ. ಒಂದನೆಯದು. ಎರಡನೆಯದು ಈ ಯೋಜನೆ ಎಷ್ಟು ವಿಳಂಬವಾಗುತ್ತದೆ ಅದರ ಖರ್ಚುವೆಚ್ಚ ಜಾಸ್ತಿಯಾಗುತ್ತದೆ ಎನ್ನುವ ಅನುಮಾನ ನನಗೆ ಉಂಟಾಗಿದೆ. ಏಕೆಂದರೆ 94ನೇ ಸಾಲಿನಲ್ಲಿ 13 ಕೋಟಿ 75 ಲಕ್ಷ ರೂಪಾಯಿಗೆ ತಯಾರಾದಂಥ ಯೋಜನೆ ಈಗ 18 ಕೋಟಿಗೆ ಹೋಗುವ ಸಾಧ್ಯತೆಗಳು ಇವೆ. ಇದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎನ್ನುವುದರ ಬಗ್ಗೆ ಹೇಳಬೇಕು. ತಮ್ಮ ಒಂದು ಆದೇಶದ ಪ್ರಕಾರ ಹಿಂದೆ, ಈ ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಒಂದು ಸದನ ಸಮಿತಿಯನ್ನು ತಾವು ರಚನೆ ಮಾಡಿ ಇಲಾಖೆಯ ಬೇಡಿಕೆಯ ಮೇಲೆ ಈ ವಿಚಾರವನ್ನು ಪ್ರಸ್ತಾಪ ಮಾಡಿರುವ ಸಂದರ್ಭದಲ್ಲಿ ಈ ಸಮಿತಿಯ ಸದಸ್ಯರು ಎಲ್ಲರೂ ಸೇರಿ ನಗರಸಭೆಪುರಸಭೆಯಿಂದ ಶೇಕಡ 15, 20, 10 ಏನು ಹಣ ಪಾವತಿ ಮಾಡಬೇಕೆಂದು ಹೇಳಿದೆ ಅದು ಮೂಲಭೂತವಾಗಿ ಹಕ್ಕುಗಳನ್ನು ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ ಕೂಡ ಆಗಿದೆ. ಅದರ ಬಗ್ಗೆಯೂ ಕೂಡ ನೋಡಬೇಕು. ನಗರಸಭೆ, ಪುರಸಭೆಗಳಿಗೆ ತಾವು ಈ ಶೇಕಡವಾರು ಹಣ ಕೇಳುವಂಥ ಪದ್ಧತಿಯನ್ನು ಬಿಡಬೇಕು. ನೇರವಾಗಿ ಈ ಸರ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಹೇಳಿ ನಾವು ವರದಿಯಲ್ಲಿ ಸರ್ಕಾರಕ್ಕೆ ಒಪ್ಪಿಸಿದ್ದೇವೆ. ಮೂರನೆಯದು, ಕೊನೆಯ ಪ್ರಶ್ನೆ.... ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಅಧ್ಯಕ್ಷರು:- ಉಪಪ್ರಶ್ನೆ ಕೇಳಿ ಎಂದರೆ ಭಾಷಣ ಮಾಡುತ್ತೀರಲ್ಲ! ನೀವು ಮಂತ್ರಿಗಳಾಗಿದ್ದವರು. ಸೀನಿಯರ್ ಲೆಜಿಸ್‌ಲೇಟರ್ಸ್. ಉಪಪ್ರಶ್ನೆ ಕೇಳಿ ಎಂದರೆ ಭಾಷಣ ಮಾಡುತ್ತೀರಲ್ಲ. ಹೀಗಾದರೆ ನಾನು ಹೇಗೆ ಸಭೆಯನ್ನು ನಡೆಸಬೇಕು ಹೇಳಿ?

ಶ್ರೀ ಸಿ.ಆರ್.ಸಗೀರ್ ಅಹಮದ್:- ನಾನು ಡಿಮ್ಯಾಂಡ್ಸ್ ಮೇಲೆಯೇ ಈ ವಿಚಾರವನ್ನು ಮಾತನಾಡುತ್ತೇನೆ. ನನಗೆ ಬಹಳ ಮನಸ್ಸಿಗೆ ನೋವಾಗಿರುವುದು....

ಅಧ್ಯಕ್ಷರು:- ಕ್ವಶ್ಚನ್ ಅವರ್‌ನಲ್ಲಿ ಲಿಮಿಟೆಡ್ ರಿಲೀಫ್. ಕ್ವಶ್ಚನ್, ಆನ್ಸರ್ ಕೊಟ್ಟಿದ್ದಾರೆ. ಅದಕ್ಕೆ ಸಪ್ಲಿಮೆಂಟ್‌ರಿ ಕೇಳಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಹೋದ ಸಾರಿಯೂ ಸಹ ನಾನು ಇದೇ ಪ್ರಶ್ನೆ ಹಾಕಿದ್ದಾಗ ಪ್ರಯತ್ನಿಸಲಾಗುವುದು ಎಂದು ಹೇಳಿದ್ದರು. ಅಸ್ಯೂರೆನ್ಸ್ ಕಮಿಟಿಗೆ ಇದು ಹೋಗಿರುತ್ತದೆ. ಹಾಗಾದರೆ ಸರ್ಕಾರ ಇವತ್ತು ಹಿಂದೆ ಇದ್ದಂಥ ಹೆಚ್‌ಯುಡಿ ಮಂತ್ರಿಗಳು ಇರಬಹುದು, ಸರ್ಕಾರ ಅನುಮತಿ ನೀಡಿದ ನಂತರ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಪ್ರಾರಂಭ ಮಾಡುವುದಕ್ಕೆ ಇರುವಂಥ ಆತಂಕ ಏನು ಎಂದು ಹೇಳಿದರೆ ಆಮೇಲೆ ಮತ್ತೆ ಉಪಪ್ರಶ್ನೆ ಕೇಳುತ್ತೇನೆ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿಗೆ ನೀರು ತರುವ ಈ ಯೋಜನೆ 1994ರಲ್ಲಿ ಮಂಜೂರಾಗಿ ಸುಮಾರು 13 ಕೋಟಿ 75 ಲಕ್ಷ ರೂಪಾಯಿಗಳಿಗೆ ತಾತ್ವಿಕವಾಗಿ ಮಂಜೂರಾಯಿತು. ಬೇಲೂರು ಬಳಿ ಯಗಚಿ ನದಿ ನೀರಿಗೆ ಅಡ್ಡಗಟ್ಟೆ ಕಟ್ಟಿ ಅಲ್ಲಿಂದ ಸುಮಾರು 26 ಕಿಲೋಮೀಟರ್‌ನಿಂದ ನೀರು ತರುವ ವ್ಯವಸ್ಥೆ ಇದರಲ್ಲಿದೆ. ಇದಕ್ಕೆ ಆಡಳಿತಾತ್ಮಕ ಅನುಮೋದನೆಗೋಸ್ಕರ ಪುರಸಭೆಯವರ ವಂತಿಗೆ ಮೂರನೇ ಒಂದು ಭಾಗ 275 ಲಕ್ಷ ರೂಪಾಯಿಗಳಲ್ಲಿ 92 ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗಿತ್ತು ಆ ಅನುಮೋದನೆಗೋಸ್ಕರ. ಆಗ ಅವರು ಹಣಕಟ್ಟಲಿಲ್ಲ. ಆದರೂ ಸಹ ಈ ಬೇಲೂರು ಮತ್ತು ಚಿಕ್ಕಮಗಳೂರು ಎರಡು ಪಟ್ಟಣಗಳಿಗೆ ನೀರು ಕೊಡುವ ಕಾರ್ಯ ಮಾಡಬೇಕೆಂದು ಹೇಳಿ ಈಗಾಗಲೇ ಅದನ್ನು ತೆಗೆದುಕೊಂಡು ಅಲ್ಲಿ ಮೂಲಸ್ಥಾವರ ಜಾಕ್‌ವೆಲ್, ಟ್ರೀಟ್‌ಮೆಂಟ್ ಪ್ಲಾಂಟ್ ಇವೆಲ್ಲಾ ಕಟ್ಟುವುದಕ್ಕೋಸ್ಕರ ಈ ಸಾರಿ 68 ಲಕ್ಷ ರೂಪಾಯಿಗಳ ಟೆಂಡರನ್ನು ಕರೆದಿದ್ದೇವೆ. ಈ ಮಧ್ಯೆ ನೀರಾವರಿ ಇಲಾಖೆಯವರು ಬೇಲೂರಿನಿಂದ ಕೊಡುವ ನೀರನ್ನು ಚಿಕ್ಕಮಗಳೂರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಸಚಿವರಾದ ನಾಗೇಗೌಡರ ಹತ್ತಿರ ಆ ಬಗ್ಗೆ ಪ್ರಸ್ತಾಪ ಮಾಡಿದಾಗ ಅವರು ಚಿಕ್ಕಮಗಳೂರಿಗೆ ಯಗಚಿ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಬೇಲೂರಿಗೆ ಮಾತ್ರ ಸಾಧ್ಯವಿದೆ ಎಂದು ಹೇಳಿದ್ದಾರೆ. ಮತ್ತು ಯೋಜನೆ ಗಾತ್ರ ಸಹ 22 ಕೋಟಿ ರೂಪಾಯಿ ಆಗಿದೆ. 13 ಕೋಟಿ ಅಲ್ಲ. 22 ಕೋಟಿ ರೂಪಾಯಿ ಆಗಿದೆ. ಪುರಸಭೆಯವರು, ನಗರಸಭೆಯವರು ಅಲ್ಲಿ ಕಟ್ಟಲಿಕ್ಕೆ ಸಾಧ್ಯವಿಲ್ಲ. ಇದನ್ನು ಹೊರಗಡೆ ಸಂಸ್ಥೆ ಅಂದರೆ ಎಡಿಪಿ ಅಥವಾ ವಿಶ್ವಬ್ಯಾಂಕ್ ಮೂಲಕ ಹಣ ತಂದು ಆ. 19 ಯೋಜನೆಗಳಲ್ಲಿ ಇದು ಸೇರಿದೆ. ಆ ದೃಷ್ಟಿಯಿಂದ ಆ ಒಂದು 19 ಯೋಜನೆಗಳಿಗೆ ಮಂಜೂರಾತಿ ಸಿಕ್ಕಾಗ ನಾವು ಈ ಯಗಚಿ ನೀರನ್ನು ಚಿಕ್ಕಮಗಳೂರು ಪಟ್ಟಣಕ್ಕೆ ಕೊಡುವ ಕಾರ್ಯವನ್ನು ನಾವು ಮಾಡುತ್ತೇವೆ. 2011ನೇ ಇಸವಿಯೊಳಗೆ ನೀರು ತರುವಂಥ ಕಾರ್ಯವನ್ನು ತೆಗೆದುಕೊಂಡು ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇವೆ.

ಅಧ್ಯಕ್ಷರು:- ಇನ್ನು ಕೇಳಬೇಕೇ?

ಶ್ರೀ ಸಿ.ಆರ್.ಸಗೀರ್ ಅಹಮದ್:- ಇದು ನನಗೆ ದೊಡ್ಡ ಸಮಸ್ಯೆ ಇದೆ. ನನ್ನ ಕ್ಷೇತ್ರದ ದೊಡ್ಡ ಸಮಸ್ಯೆ ಎಂದು ಹೇಳಿದರೆ ನಮ್ಮಲ್ಲಿ ಸರ್ಕಾರದಿಂದ ಆಗಬೇಕಾದಂಥ ಬಹಳ ಕಾರ್ಯಕ್ರಮಗಳು ನಡೆಯಲಿಲ್ಲ. ತಾವು ಹೇಳುತ್ತೀರಿ, ತಾವು ಕೂಡ ಮಂತ್ರಿಯಾಗಿದ್ದರಿ ಏನು ಮಾಡಿದ್ದೀರಿ ಎಂದು ಕೇಳಬಹುದು. ಆ ಆಲೋಚನೆ ಇಟ್ಟುಕೊಂಡು ನಾವು ಈ ಕಾರ್ಯಕ್ರಮವನ್ನು ಮಾಡಿಕೊಂಡೆವು. ಆದರೆ ಈಗ ನನ್ನ ಆತಂಕ ಏನಿದೆ ಎಂದರೆ ಮಾನ್ಯ ಮಂತ್ರಿಗಳು ಹೇಳುತ್ತಾರೆ, 20 ಸಾವಿರ ಜನಸಂಖ್ಯೆ ಇದ್ದಂಥ ಕಾಲದಲ್ಲಿ ಚಿಕ್ಕಮಗಳೂರಿಗೆ ಕುಡಿಯುವ ನೀರಿನ ಯೋಜನೆಯನ್ನು ನಾವು ಹಮ್ಮಿಕೊಂಡಿದ್ದೆವು. ಆ ನಂತರ ಸರ್ಕಾರದವರು ಇನ್ನೊಂದು ಯೋಜನೆಯನ್ನು

ಹಾಕಿದ್ದರು, ಅದು ಯಶಸ್ವಿಯಾಗಿ ನಡೆಯುತ್ತಾ ಇದೆ. ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಮಾನ್ಯ ಸರ್ಕಾರದವರು ಹೇಳುತ್ತಿದ್ದಾರೆ, 2011ನೇ ಇಸವಿಗೆ ನಾವು ಇದನ್ನು ಪೂರೈಸಿಕೊಡುತ್ತೇವೆ ಎಂದು ಹೇಳಿದರೆ....

ಶ್ರೀ ಬಿ.ಎನ್.ಬಚ್ಚೇಗೌಡ:- ಒಂದು ಲಕ್ಷದ ಐವತ್ತು ಸಾವಿರ ಜನಸಂಖ್ಯೆಯಾಗುತ್ತದೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು 2011ನೇ ಇಸ್ವಿಗೆ ಒದಗಿಸುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಅಧ್ಯಕ್ಷರ ಮುಖಾಂತರ ನನ್ನ ವಿನಂತಿ ಏನೆಂದರೆ ಕೈಮುಗಿದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಸರ್ಕಾರದವರು ಪುರಸಭೆಯಿಂದ ಹಣ ತೆಗೆದುಕೊಳ್ಳುವುದನ್ನು ಬಿಡಬೇಕು.

ಅಧ್ಯಕ್ಷರು:- ತಾವು ಉತ್ತರ ಸರಿಯಾಗಿ ಗಮನಿಸಿಕೊಳ್ಳಲಿಲ್ಲ. 68 ಲಕ್ಷ ರೂಪಾಯಿಗಳನ್ನು ಈಗಾಗಲೇ ನಾನು ರೆಡಿ ಮಾಡಿ ಇಟ್ಟಿದ್ದೇನೆ ಅಂತ ಹೇಳಿದರು.....

ಶ್ರೀ ಸಿ.ಆರ್.ಸಗೀರ್ ಅಹಮದ್:- ದಯಮಾಡಿ ತಾವು ತಪ್ಪು ತಿಳಿಯಬಾರದು. 64 ಲಕ್ಷ ರೂಪಾಯಿ ಬಿಡುಗಡೆ ಮಾಡಿದವನು ನಾನು. ಬಿಡುಗಡೆ ಮಾಡಿ ಒಂದು ಮುಕ್ಕಾಲು ವರ್ಷ ಆಗಿದೆ. ನನ್ನ ಹತ್ತಿರ ದಾಖಲಾತಿಗಳು ಇವೆ. ಆ ಕಾಲದಿಂದ ಟೆಂಡರನ್ನು ಕರೆಯುತ್ತಿದ್ದಾರೆ. ಟೆಂಡರ್ ಯಾರೂ ಹಾಕುತ್ತಿಲ್ಲ. ಎರಡನೆಯದು, ಇದು ನನ್ನ ಸಮಸ್ಯೆ. ನಾನು ತಮಗೆ ಹೇಳುತ್ತಿದ್ದೇನೆ, ಸರ್ಕಾರಕ್ಕೆ ಹೇಳುತ್ತಿಲ್ಲ. ತಾವು ಏನು ನಿರ್ಣಯ ಹೇಳುತ್ತೀರಿ, ಅದನ್ನು ಒಪ್ಪಿಕೊಂಡು ನಾನು ಕೂಡುವುದಕ್ಕೆ ಸಿದ್ಧನಾಗಿದ್ದೇನೆ. ಮುಖ್ಯವಾಗಿರುವ ವಿಚಾರ ಎಂದು ಹೇಳಿದರೆ ಇವತ್ತು ನನ್ನ ಜಿಲ್ಲೆಯಲ್ಲಿ ಹುಟ್ಟುವಂಥ ಎಲ್ಲಾ ನದಿಗಳ ನೀರು ಬೇರೆ ಬೇರೆ ಜಿಲ್ಲೆಯವರಿಗೆ ಒದಗಿಸಿಕೊಡುವುದಕ್ಕೆ ಈ ಸರ್ಕಾರ ಆಸಕ್ತರಾಗಿದ್ದಾರೆ. ಆದರೆ ನನ್ನ ಪಟ್ಟಣಕ್ಕೆ ಬೇಕಾಗಿರುವ ಕುಡಿಯುವ ನೀರಿನ ಯೋಜನೆಗೆ ಇವತ್ತು ಭಾರೀ ನೀರಾವರಿ ಸಚಿವರು ಅನುಮತಿ ನೀಡುವುದಿಲ್ಲ ಎಂದರೆ ನಾನು ಶಾಸಕನಾಗಿ ಈ ಸದನದಲ್ಲಿ ಉಳಿಯುವಂಥ ಅರ್ಹತೆ ನನಗೆ ಇರುತ್ತದೆಯೇ ಎಂದು ದಯವಿಟ್ಟು ತಾವು ಹೇಳಬೇಕು.

ಅಧ್ಯಕ್ಷರು:- ನೀವು ಇರಬೇಕಾಗುತ್ತದೆ.

SRI B.N.BACHE GOWDA:- You are coming to conclusions. You are drawing inference.

ಶ್ರೀ ಸಿ.ಆರ್.ಸಗೀರ್ ಅಹಮದ್:- ತಾವು ದಯಮಾಡಿ ಸಧ್ಯದಲ್ಲೇ ಆ ಕೆಲಸ ಪ್ರಾರಂಭ ಮಾಡುತ್ತೇನೆ ಎಂದು ಹೇಳಿದರೆ ಸಾಕು.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಸಗೀರ್ ಅಹಮದ್‌ರವರೇ, ಮಾಡಿಕೊಡುತ್ತೇವೆ. ನೀರಾವರಿ ಇಲಾಖೆಯವರು ಬೇಲೂರಿಗೆ ಮೊದಲು ಆದ್ಯತೆ

ಕೊಟ್ಟು ಬೇಲೂರಿನಲ್ಲಿ ಕಟ್ಟುವಂಥ ಯಗಚಿ ಅಣೆಕಟ್ಟಿಗೆ ಅವರಿಗೆ ಆದ್ಯತೆ ಕೊಟ್ಟು ಮಾಡಬೇಕು. ಚಿಕ್ಕಮಗಳೂರಿಗೆ ನೀರು ಸಿಗುವಂಥ ವ್ಯವಸ್ಥೆಯಾದಾಗ ಕೊಡೋಣ ಎಂದಿದ್ದಾರೆ. ಮಾನ್ಯ ನೀರಾವರಿ ಸಚಿವರ ಹತ್ತಿರ ಅದರ ಬಗ್ಗೆ ಮಾತನಾಡಿ ತಮಗೆ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ ಎಂದು ಹೇಳುತ್ತಾ ಇದ್ದರೆ ಏನು ಹೇಳುತ್ತಿದ್ದೀರಿ ಎಂದರೆ ಏನು ಮಾಡುವುದು?

ಶ್ರೀ ಸಿ.ಆರ್.ಸಗೀರ್ ಅಹಮದ್:- ಆಶ್ವಾಸನೆ ಕೊಡಬೇಡಿ. ಕೆಲಸ ಶುರು ಮಾಡಿಕೊಟ್ಟರೆ ಸಾಕು.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾಡಿಕೊಡುತ್ತೇನೆ.

ವಿಷಯ:- ಶಾಶ್ವತ ಹಿಂದುಳಿದ ವರ್ಗಗಳ ಆಯೋಗ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 149 (670)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ರಚನೆ, ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರಮುಖವಾದ ಈ ಆಯೋಗ ರಚನೆಗೆ ವಿಳಂಬವಾಗಲು ಕಾರಣಗಳೇನು?

ಇ) ಈ ಆಯೋಗವನ್ನು ನಿರ್ದಿಷ್ಟವಾಗಿ ಯಾವಾಗ ನೇಮಿಸಲಾಗುವುದು?

ಶ್ರಿ ಮಾಲೀಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು):-

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೇ, ಈ ಶಾಶ್ವತ ಹಿಂದುಳಿದ ವರ್ಗದ ಆಯೋಗದ ಉದ್ದೇಶ ಏನು? ಸುಮಾರು ವರ್ಷಗಳಿಂದ ಈ ಆಯೋಗವನ್ನು ನೇಮಿಸುವುದಕ್ಕೆ ತಮ್ಮ ಕಡೆಯಿಂದ ಆಗಲಿಲ್ಲ? ಇದಕ್ಕೆ ಕಾರಣ ಏನು ಎಂದು ಹೇಳಿದರೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ತಾವು ಏನು ಪರಿಶೀಲನೆ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ. ಮತ್ತು ಮೂರನೆಯದಾಗಿ, ತಾವು ಯಾವಾಗ ಈ ಆಯೋಗವನ್ನು ನೇಮಿಸಿ ಕಾರ್ಯಕ್ರಮಗಳನ್ನು ಆದಷ್ಟು ಶೀಘ್ರ ಪ್ರಾರಂಭ ಮಾಡುವುದಕ್ಕೆ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ?